ವಿಶಾಖ ಎನ್.

# ಸಲ್ಮಾನ್ ಮೇಲೆ ಅಮೀರ್ ಕನಸು



ಸಿನಿಮಾ ಅಭಿನಯದಿಂದ ಒಂದಿಷ್ಟು ಕಾಲ ವಿರಾಮ ಪಡೆಯುವುದಾಗಿ ಅಮೀರ್ ಖಾನ್ ಪ್ರಕಟಿಸಿ ತಿಂಗಳುಗಳೇ ಉರುಳಿವೆ. 'ಲಾಲ್ ಸಿಂಗ್ ಛಡ್ಡಾ' ಹಿಂದಿ ಸಿನಿಮಾ ದಯನೀಯವಾಗಿ ಸೋಲು ಅನುಭವಿಸಿದ್ದೇ ಅವರು ಕಂಗಾಲಾಗಿದ್ದರು. ಹಾಗೆ ನೋಡಿದರೆ, ಗೆಲುವಿನ ಪರಾಕಾಷ್ಠೆ ಅನುಭವಿಸಿದ್ದ ಅವರಿಗೆ ಸೋಲಿನ ಪಾಠ ಹೊಸದೇನೂ ಆಗಿರಲಿಲ್ಲ. ಮಾಗಿದ ವಯಸ್ಸಿನಲ್ಲಿ ದೈಹಿಕ, ಮಾನಸಿಕ ಶ್ರಮವೆಲ್ಲ ಹೊಳೆಯಲ್ಲಿ ತೊಳೆದ ಹುಣಸೆ ತರಹ ಆದರೆ ಸಹಿಸಿಕೊಳ್ಳುವುದು ತುಸು ಕಷ್ಟವೆ. ಹಾಗಂತ ಸಿನಿಮಾ ಕನಸು ಅವರನ್ನು ಕಾಡದೆ ಬಿಡುವುದಿಲ್ಲ. ಅದಕ್ಕೇ ಅವರೀಗ ತಮ್ಮ ಕನಸನ್ನು ಸಲ್ಮಾನ್ ಖಾನ್ ಮೂಲಕ ನನಸು ಮಾಡಿಕೊಳ್ಳಲು ಹೊರಟಿದ್ದಾರೆ.



'Campeons' ಎಂಬ ಸ್ಪೇನ್‌ನ ಸಿನಿಮಾವನ್ನು ಹಿಂದಿಗೆ ಒಗ್ಗಿಸುವುದು ಸಲ್ಮಾನ್ ಕನಸಾಗಿತ್ತು. ದೈಹಿಕವಾಗಿ ಏನಾದರೂ ಸಮಸ್ಯೆ ಇರುವವರನ್ನು ಸೇರಿಸಿಕೊಂಡು, ಅವರ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ತರಬೇತಿ ನೀಡಿ, ಅದು ಗೆಲ್ಲುವಂತೆ ಮಾಡುವ ಮಾನವೀಯ ಕಥೆಯನ್ನು ಒಳಗೊಂಡ ಆ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಗಿತ್ತು. ಕ್ಸೇವಿಯರ್ ಫೆಸರ್ ಎಂಬ ನಿರ್ದೇಶಕ ಇದನ್ನು ತೆರೆಗೆ ಸಮರ್ಥವಾಗಿ ತಂದಿದ್ದರು. ಪ್ರಮುಖ ಚಿತ್ರೋತ್ಸವಗಳಲ್ಲಿಯೂ ಅದು ಸ್ಪರ್ಧೆ ಒಡ್ಡಿ, ಪ್ರಶಸ್ತಿಗಳನ್ನೂ ತನ್ನದಾಗಿಸಿಕೊಂಡಿತ್ತು. ಅದನ್ನು ಹಿಂದಿ ಭಾಷೆಗೆ ರೂಪಾಂತರಿಸಿ, ಸಿನಿಮಾ ಮಾಡಬೇಕೆಂಬ ಕನಸು ಅಮೀರ್ ಖಾನ್ ಅವರದ್ದಾಗಿತ್ತು. ಆದರೆ, 'ಲಾಲ್ ಸಿಂಗ್ ಛಡ್ಡಾ' ಸೋಲು ಆ ಯೋಚನೆಯನ್ನೂ ಅವರು ಬದಿಗೊತ್ತುವಂತೆ ಮಾಡಿತ್ತು.

ಇದೀಗ ಸಲ್ಮಾನ್ ಖಾನ್ ಅವರನ್ನು ಆ ಪಾತ್ರದಲ್ಲಿ ಕಾಣಬೇಕೆಂಬ ಹೊಸ ಬಯಕೆ ಅಮೀರ್ ಅವರಲ್ಲಿ ಮೂಡಿದೆ. ಚಿತ್ರಕಥೆ ಕೇಳಿದ ಸಲ್ಮಾನ್ ಕೂಡ ಆ ಪಾತ್ರದ ತೂಕ ನೋಡಿ ಖುಷಿಪಟ್ಟಿದ್ದಾರೆ. ಅಮೀರ್ ಖಾನ್ ಆ ಪಾತ್ರ ಮಾಡುವುದೇ ಸೂಕ್ತ ಎಂದು ಅವರು ಸಲಹೆ ನೀಡಿದರಾದರೂ, ಸದ್ಯಕ್ಕೆ ಅಭಿನಯಿಸಲು ಅಮೀರ್ ಸಿದ್ಧರಿಲ್ಲ. ಸಿನಿಮಾ ನಿರ್ಮಾಣಕ್ಕೆ ಅವರು ಒಪ್ಪಿದ್ದಾರೆ. ಸಲ್ಮಾನ್ ನಾಯಕ, ಅಮೀರ್ ನಿರ್ಮಾಪಕ ಆಗುವುದು ಬಹುತೇಕ ಖಚಿತವಾಗಿದೆ.

ಈಗಾಗಲೇ ಒಪ್ಪಿಕೊಂಡಿರುವ ಸಿನಿಮಾ ಕೆಲಸಗಳು ಮುಗಿದಮೇಲೆ ಸಲ್ಮಾನ್ ಖಾನ್ ಈ ಸಿನಿಮಾದಲ್ಲಿ ಅಭಿನಯಿಸುವುದು ನಿಶ್ಚಿತ ಎಂದು ಅಮೀರ್ ಖಾನ್ ಸ್ನೇಹಿತರೊಬ್ಬರು ಹೇಳಿಕೊಂಡಿದ್ದಾರೆ. ಅಮೀರ್ ಮಾತ್ರ ಈ ವಿಷಯದ ಕುರಿತು ಏನೊಂದನ್ನೂ ಹೇಳಿಲ್ಲ. 'ಪಠಾಣ್' ಸಿನಿಮಾದಲ್ಲಿ ಶಾರುಖ್ ಖಾನ್ ಜತೆ ಕೂಡ ಸಲ್ಮಾನ್ ಅತಿಥಿ ಪಾತ್ರದಲ್ಲಿ ನಟಿಸಿದ್ದಾರೆ. ಆ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಗಿದೆ.



## ಹಳೆಯ ಕಷ್ಟ ಬಿಚ್ಚಿಟ್ಟ ಸಮೀರಾ

'ಮೈನೆ ದಿಲ್ ತುಝ್ಕೊ ದಿಯಾ' ಎಂಬ ಹಿಂದಿ ಸಿನಿಮಾದಲ್ಲಿ ಸೊಹೇಲ್ ಖಾನ್‌ಗೆ ನಾಯಕಿಯಾಗಿ ಸಮೀರಾ ರೆಡ್ಡಿ ನಟಿಸಿದ್ದು ಎಷ್ಟೋ ಜನರಿಗೆ ನೆನಪಿನಲ್ಲಿ ಇರಲಿಕ್ಕಿಲ್ಲ. 2002ರಲ್ಲಿ ತೆರೆಕಂಡಿದ್ದ ಆ ಸಿನಿಮಾ ಅಷ್ಟೇನೂ ಸದ್ದು ಮಾಡಿರಲಿಲ್ಲ. ಬಾಲಿವುಡ್ ಕನಸು ಹೊತ್ತಿದ್ದ ಸಮೀರಾ ಈಗ ಹಳೆಯ ಸಂಕಟವೊಂದನ್ನು ಹಂಚಿಕೊಂಡಿದ್ದಾರೆ.

'ಹತ್ತಿಪ್ಪತ್ತು ವರ್ಷಗಳ ಹಿಂದೆ ಸಿನಿಮಾ ನಟಿಯರಿಗೆಲ್ಲ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಅನಿವಾರ್ಯ ಸೃಷ್ಟಿಯಾಗಿತ್ತು. ಕೆಲವರು ಮೂಗು, ಕೆಲವರು ಸ್ತನಗಳ ಶಸ್ತ್ರಚಿಕಿತ್ಸೆಗೆ ಮೊರೆಹೋಗುತ್ತಿದ್ದರು. ನನಗೂ ಆಗ ಗೊಂದಲವಿತ್ತು. ನನ್ನ ಸ್ತನಗಳು ಇನ್ನೂ ದಪ್ಪ ಇರಬೇಕಿತ್ತು ಎಂಬ ವಿಷಯ ಕಾಡುತ್ತಿತ್ತು. ಪ್ಯಾಡೆಡ್ ಬ್ರಾ ತೊಟ್ಟೇ ನಾನು ಶೂಟಿಂಗ್‌ಗೆ ಹೋಗುವುದು ಅಭ್ಯಾಸವಾಗಿತ್ತು. ಯಾಕೆ ಇಷ್ಟೆಲ್ಲ ಒದ್ದಾಡಬೇಕೊ ಎಂದೂ ಅನಿಸುತ್ತಿತ್ತು' ಎಂದು ಅವರು ತಮ್ಮ ಅನುಭವ ಹೇಳಿಕೊಂಡಿದ್ದಾರೆ.

ಹಿಂದಿ ಸಿನಿಮಾಗಳಲ್ಲಿ ಅಷ್ಟೇ ಅಲ್ಲದೆ ತಮಿಳು, ತೆಲುಗು ಚಿತ್ರಗಳಲ್ಲಿಯೂ ಅಭಿನಯಿಸಿದ್ದ ಸಮೀರಾ, ಡಯೆಟಿಷಿಯನ್ ಮಾತು ಕೇಳಿ ಬರೀ ಒಂದು ಇಡ್ಲಿ ತಿಂದು, ಕೆಲವು ದಿನಗಳನ್ನು ಕಳೆದಿದ್ದ ನೆನಪನ್ನೂ ಬಿಚ್ಚಿಟ್ಟಿದ್ದಾರೆ.